ರಿಷಿ ಕರೆ ಮಾಡಿದ್ದರು. 'ಅಮ್ಮು, ಹುಷಾರಾಗಿದ್ದೀಯ ತಾನೇ?'

'ಹೂಂ.'

'ಇವತ್ತು ಭಟ್ಟಾಚಾರ್ಯ ಮನೆಯಲ್ಲಿ ಸಣ್ಣ ಸಮಾರಂಭ, ರಾತ್ರಿ ಊಟ ಅಲ್ಲೇ ಆಯ್ತು. ಸೆಲ್ ಸ್ವಿಚ್ ಆಫ್ ಮಾಡಿದ್ದೆ. ಈಗಷ್ಟೇ ಮನೆಗೆ ಬಂದದ್ದು. ತಡವಾಗಿದ್ದಕೆ ಸಾರಿ.' ದೆಹಲಿಗೆ ಹೋದಮೇಲೆ ಸಾಕಷ್ಟು ಬದಲಾವಣೆ, ನನ್ನೊಂದಿಗೆ ನಾಜೂಕಾಗಿ ಮಾತನಾಡುವುದನ್ನು ಕಲಿತಿದ್ದಾರೆ. ಕೇಳಲು ಅಪ್ಯಾಯಮಾನವಾಗಿರುತ್ತದೆ.

ಆಫೀಸಿನ ಹೊಸ ಸುದ್ದಿಯನ್ನು ಸೂಕ್ಷ್ಮವಾಗಿ ಹೇಳಿ, 'ರಿಷಿ, ನನಗೇನು ಮಾಡಬೇಕೋ ತಿಳೀತಿಲ್ಲ, ಗೊಂದಲ' ಎಂದೆ.

'ಅಮ್ಮು, ನನ್ನನ್ನು ಸ್ವಾರ್ಥಿ ಅಂತ ಭಾವಿಸದಿದ್ದರೆ ಒಂದು ಸಲಹೆ.'

'.....'

'ಮದುವೆಯಾಗಿ ಇಷ್ಟು ವರ್ಷ ಆದರೂ ನಾವಿಬ್ಬರೂ ಹೆಚ್ಚು ಹತ್ತಿರವಾಗಲು ಆಗಿಲ್ಲ ಅಂತಲೇ ಅಂದುಕೊಂಡಿದ್ದೀನಿ. ಬರಿ ಓದು, ಅಧ್ಯಯನ ಅಂತ ನನ್ನದೇ ಲೋಕದಲ್ಲಿ ಮುಳುಗಿದ್ದೆ. ಮಗನನ್ನು ಚೆನ್ನಾಗಿ ರೂಪಿಸಿ ಅವನ ಆಸಕ್ತಿಯ ದಾರಿಗೆ ಹರಿಬಿಟ್ಟಿರೋದು ಸಾಧನೆಯೇ ಸರಿ. ಇಲ್ಲಿಗೆ ಬಂದ ಮೇಲೆ ನಾನು ಏಷ್ಟೆಲ್ಲ ಕಳೆದುಕೊಂಡೆ ಎನ್ನುವ ಅರಿವು ಮೂಡ್ತಿದೆ. ಆಫ್ ಲೇಟ್ ನಿನ್ನ ಅನುಪಸ್ಥಿತಿ ನನ್ನನ್ನು ತುಂಬಾ ಕಾಡ್ತಿದೆ ಅಮ್ಮು...'

ನನ್ನ ಕಣ್ತುಂಬಿ ಬಂತು.

'ರಿಸೈನ್ ಮಾಡಿ ಇಲ್ಲಿಗೆ ಬಂದ್ಬಿಡು, ಕಳೆದು ಹೋದ ಕ್ಷಣಗಳನ್ನು ಹೊಸದಾಗಿ ಕಟ್ಟಿಕೊಳ್ಳುವ ಪ್ರಯತ್ನವನ್ನಾದರೂ ಮಾಡೋಣ. ಸ್ಟಿಲ್ ದೇರ್ ಈಸ್ ಎ ಲಾಂಗ್ ವೇ ಟು ಗೋ.'

'.....'

'ಅಮ್ಮು, ಕೇಳ್ತಿದ್ದೀಯಾ?'

ನನಗೆ ಬೇಕಾದ ಉತ್ತರ ಸಿಕ್ಕಿತ್ತು.

'ಹೂಂ... ಮತ್ತೆ, ಪ್ರವಾಸಕ್ಕೆ ಬರ್ತೀನಿ, ಸೀಟ್ ಬ್ಲಾಕ್ ಮಾಡ್ಬಿಡಿ ರಿಷಿ...'

'ಹೌ ನೈಸ್! ಥ್ಯಾಂಕ್ಸ್ ಅಮ್ಮು.'

'ನಾಳೇನೇ ಪೇಪರ್ ಹಾಕ್ತೀನಿ.'

'ಹಾಗೇ ಮಾಡು, ಬ್ಯಾಂಕಿಗೆ ಹೋಗೋದು ಬೇಡ ಅನ್ನಿಸಿದರೆ ರಜೆ ಹಾಕಿ ಬಂದ್ಬಿಡು. ಮುಂದಿನವಾರ ನಾಲ್ಕು ದಿನ ಸರಣಿ ರಜೆ ಇದೆ ರೆಡಿಯಾಗಿರು, ನಾನು ಬಂದು ಕರ್ಕೊಂಡು ಬರ್ತೀನಿ.'

'ಥ್ಯಾಂಕ್ಸ್ ಎ ಲಾಟ್, ತಲೆಭಾರ ಕಡಿಮೆಯಾಯ್ತು.'

'ಎಲ್ಲ ಸರಿಹೋಗುತ್ತೆ, ಲೇಟಾಯ್ತು, ಆರಾಮವಾಗಿ ಮಲಕ್ಕೋ, ಗುಡ್ ನೈಟ್.'

'ಗುಡ್ ನೈಟ್' ಕರೆ ಮುಗಿಸಿದೆ.

**ಕೆ.ವಿ. ರಾಜಲಕ್ಷ್ಮಿ**

ಎಂ.ಕಾಂ., ಎಲ್.ಎಲ್.ಬಿ. ಪದವೀಧರೆ. ದೂರ ಸಂಪರ್ಕ ಇಲಾಖೆಯಲ್ಲಿ ಸೇವೆ ಸಲ್ಲಿಸಿ, ಲೆಕ್ಕಾಧಿಕಾರಿಯಾಗಿ ನಿವೃತ್ತರು. ಪ್ರಸ್ತುತ ವಕೀಲ ವೃತ್ತಿಯಲ್ಲಿ ತೊಡಗಿಸಿಕೊಂಡಿದ್ದು, ಬೆಂಗಳೂರಿನಲ್ಲಿ ನೆಲೆಸಿದ್ದಾರೆ. 200ಕ್ಕೂ ಹೆಚ್ಚು ಕತೆ, ಹಾಸ್ಯ ಲೇಖನಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ.